ಕರ್ನಾಟಕ ಸರ್ಕಾರ

# ಹಾಸನ ವೈದ್ಯಕೀಯ ಮತ್ತು ವಿಜ್ಞಾನಗಳ ಸಂಸ್ಥೆ, ಹಾಸನ.

# HASSAN INSTITUTE OF MEDICAL SCIENCES, HASSAN

(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN
Website: www.hims-hassan.org Phone/Fax No.08172-231699, 231599, Email:directorhims@yahoo.com

## 30ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳು

## ದಿನಾಂಕ:31–08–2017ನೇ ಗುರುವಾರ

:ಸ್ಥಳ:

ಕೊಠಡಿ ಸಂಖ್ಯೆ: 301, 3ನೇ ಮಹಡಿ,

ವಿಧಾನ ಸೌಧ, ಬೆಂಗಳೂರು

ಕರ್ನಾಟಕ ಸರ್ಕಾರ
# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
# HASSAN INSTITUTE OF MEDICAL SCIENCES, HASSAN
**(An Autonomous Institute under the Dept of Medical Education, Government of Karnataka)**
**SRI CHAMARAJENDRA HOSPITAL CAMPUS, HASSAN-573201**
Website: www.hims-hassan.org Phone/Fax No.08172-231699 Email:directorhims@yahoo.com

ನಿರ್ದೇಶಕರ ಕಛೇರಿ ಹಿಮ್ಸ್, ಹಾಸನ

## 30ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳು

ದಿನಾಂಕ:31-08-2017 ಗುರುವಾರ, ಮಧ್ಯಾಹ್ನ:.3.00ಗಂಟೆಗೆ ಕೊಠಡಿ ಸಂಖ್ಯೆ:301, 3ನೇ ಮಹಡಿ, ವಿಧಾನ ಸೌಧ, ಬೆಂಗಳೂರು ಇಲ್ಲಿ ಸನ್ಮಾನ್ಯ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್, ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇವರ ಘನ ಅಧ್ಯಕ್ಷತೆಯಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 30ನೇ ಆಡಳಿತ ಮಂಡಳಿ ಸಭೆ ಸೇರಿ ನಡೆಸಿದ ಸಭಾ ನಡವಳಿಗಳು.

**ಒಟ್ಟು ಸದಸ್ಯರ ಸಂಖ್ಯೆ: 8** **ಹಾಜರಿದ್ದ ಸದಸ್ಯರ ಸಂಖ್ಯೆ:04**

| | | | |
|---|---|---|---|
| 01 | ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು,<br>ಆಡಳಿತ ಮಂಡಳಿ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ | ಅಧ್ಯಕ್ಷರು | ಹಾಜರಿರುತ್ತಾರೆ |
| 02 | ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ), ಕರ್ನಾಟಕ ಸರ್ಕಾರ,<br>ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವಿಧಿ, 6ನೇ ಮಹಡಿ, 4ನೇ ಗೇಟ್, ಬೆಂಗಳೂರು. | ಉಪಾಧ್ಯಕ್ಷರು | ಹಾಜರಿರುತ್ತಾರೆ |
| 03 | ಮಾನ್ಯ ಉಪಕುಲಪತಿಗಳು,<br>ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾಲಯ,<br>ಕರ್ನಾಟಕ, ಜಯನಗರ, ಬೆಂಗಳೂರು. | ಸದಸ್ಯರು | -- |
| 04 | ಮಾನ್ಯ ಪ್ರಧಾನ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | -- |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | | |
|---|---|---|---|
| 05 | ಮಾನ್ಯ ಪ್ರಧಾನ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ವಿಕಾಸ ಸೌಧ,<br>ಬೆಂಗಳೂರು. | ಸದಸ್ಯರು | -- |
| 06 | ಮಾನ್ಯ ನಿರ್ದೇಶಕರು,<br>ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,<br>ಕರ್ನಾಟಕ ಸರ್ಕಾರ, ಆನಂದರಾವ್ ವೃತ್ತ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 07 | ಮಾನ್ಯ ಜಿಲ್ಲಾಧಿಕಾರಿಗಳು,<br>ಹಾಸನ ಜಿಲ್ಲೆ, ಹಾಸನ. | ಸದಸ್ಯರು | -- |
| 08 | ಮಾನ್ಯ ನಿರ್ದೇಶಕರು,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ ಕಾರ್ಯದರ್ಶಿ | ಹಾಜರಿರುತ್ತಾರೆ |

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 01 | ದಿನಾಂಕ:15-03-2017 ರಂದು ನಡೆದ 29ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳ ಅನುಪಾಲನಾ ವರದಿಯನ್ನು ಓದಿ ಅನುಮೋದಿಸುವುದು. | ದಿನಾಂಕ:15-03-2017 ರಂದು ನಡೆದ 29ನೇ ಆಡಳಿತ ಮಂಡಳಿ ಸಭೆಯಲ್ಲಿ 21 ವಿಷಯಗಳ ಬಗ್ಗೆ ಚರ್ಚಿಸಿ ತೆಗೆದುಕೊಂಡ ತೀರ್ಮಾನಗಳ ಅನುಪಾಲನಾ ವರದಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು. ಸದರಿ ಸಭೆಯ ಅನುಪಾಲನಾ ವರದಿಯನ್ನು ಸರ್ವಾನುಮತದಿಂದ ಒಪ್ಪಿ ಅಂಗೀಕರಿಸಲಾಯಿತು. |
| 02 | ದಿನಾಂಕ:24-06-2017ರಂದು ನಡೆದ 17ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳನ್ನು ಓದಿ ಅನುಮೋದಿಸುವ ಬಗ್ಗೆ. | ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಆಕುಕ, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ:24-06-2017 ರಂದು ನಡೆದ 17ನೇ ಆರ್ಥಿಕ ಸಮಿತಿ ಸಭೆಯಲ್ಲಿ 12 ವಿಷಯಗಳ ಬಗ್ಗೆ ಚರ್ಚಿಸಿ ತೆಗೆದುಕೊಂಡ ನಿರ್ಣಯಗಳ ಸಭಾ ನಡವಳಿಯನ್ನು ಅನುಮೋದನೆಗಾಗಿ ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು. ಸದರಿ ಸಭೆಯ ನಡವಳಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. ಈ ಪೈಕಿ ಈ ಕೆಳಕಂಡ<br>**ಅಜೆಂಡಾ ಕ್ರಮ ಸಂಖ್ಯೆ: 02** ರಲ್ಲಿ 2017-18ನೇ ಸಾಲಿನಲ್ಲಿ ಹಿಮ್ಸ್ ಸಂಸ್ಥೆಗೆ ಸರ್ಕಾರದಿಂದ ನಿಗದಿಯಾಗಿರುವ ಬಜೆಟ್ ಅನುದಾನವು ಕನಿಷ್ಠ ಅವಶ್ಯಕತೆಗಿಂತ ಕಡಿಮೆ ಇರುವುದರಿಂದ ಅವಶ್ಯಕವಿರುವ ವೆಚ್ಚಗಳಿಗೆ ಪ್ರತ್ಯೇಕ ಪ್ರಸ್ತಾವನೆ ಸಲ್ಲಿಸುವುದೆಂದು ಆರ್ಥಿಕ ಸಮಿತಿ ಸಭೆಯಲ್ಲಿ ತೀರ್ಮಾನಿಸಿರುವುದರ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿ 2017-18ನೇ ಸಾಲಿಗೆ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ಕೊರತೆಯಾಗುವ ಅನುದಾನಕ್ಕೆ ಪ್ರತ್ಯೇಕ ಪ್ರಸ್ತಾವನೆ ಸಲ್ಲಿಸುವುದೆಂದು ತೀರ್ಮಾನಿಸಿ ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು.<br>**ಅಜೆಂಡಾ ಕ್ರಮ ಸಂಖ್ಯೆ: 04** ರಲ್ಲಿ ಎಮ್.ಸಿ.ಐ. ನಿಯಮಾನುಸಾರ 150 ವಿದ್ಯಾರ್ಥಿಗಳ ಪ್ರವೇಶಾತಿಗೆ ಅವಶ್ಯಕವಿರುವ ಉಪಕರಣ, ಪೀಠೋಪಕರಣ ಹಾಗೂ ಇತ್ಯಾದಿ ಸಾಮಗ್ರಿಗಳನ್ನು ಖರೀದಿಸುವ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಅನುದಾನ ಬಿಡುಗಡೆಯ ಆದೇಶ ಬಂದ ನಂತರ ಟೆಂಡರ್ ತೆರೆಯುವುದೆಂದು ಆರ್ಥಿಕ ಸಮಿತಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನವನ್ನು ಒಪ್ಪಿ ಈ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು.<br>**ಅಜೆಂಡಾ ಕ್ರಮ ಸಂಖ್ಯೆ: 08ರಲ್ಲಿ** ಅಕೌಟೆಂಟ್ ಜನರಲ್, ಕರ್ನಾಟಕ ವೃತ್ತ, ಬೆಂಗಳೂರುರವರು ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿರುವ ಎಲ್ಲಾ ವಿಭಾಗಗಳ 2014–15 ಮತ್ತು 2015–16ನೇ ಸಾಲಿನ ಲೆಕ್ಕ –ಪರಿಶೋಧನೆ ನಡೆಸಿ ಅಡಿಟ್ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ಅಡಿಟ್ ವರದಿಯಲ್ಲಿ ಸೂಚಿತವಾಗಿರುವ ಅಂಶಗಳಿಗೆ ಸಂಸ್ಥೆಯಿಂದ ಸಿದ್ದಪಡಿಸಲಾದ ಕಂಡಿಕೆವಾರು ಉತ್ತರಗಳನ್ನು ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವುದನ್ನು ಸಭೆಯಲ್ಲಿ ಕೂಲಕಂಷವಾಗಿ ಪರಿಶೀಲಿಸಿ ಸದರಿ ಉತ್ತರಗಳನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. ಈ ಬಗ್ಗೆ ಮಹಾಲೇಖಪಾಲಕರು, ಕರ್ನಾಟಕ ವೃತ್ತ, ಬೆಂಗಳೂರು ಇವರಿಗೆ ವರದಿ ಸಲ್ಲಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು.<br>**ಅಜೆಂಡಾ ಕ್ರಮ ಸಂಖ್ಯೆ:9** ರಲ್ಲಿ ಸಂಸ್ಥೆಯ ಕಾಲೇಜು ಕಟ್ಟಡ ಮತ್ತು ಬಾಲಕ ಬಾಲಕಿಯರ ವಸತಿ ನಿಲಯಗಳಿಗೆ ಹೊರಭಾಗ ಮತ್ತು ಒಳಭಾಗದ ಪೈಂಟಿಂಗ್ ಮತ್ತು ಟೆರೆಸ್ ವಾಟರ್‌ಪ್ರೂಫ್ ಲಿಕೇಜ್ ಕಾಮಗಾರಿಗಳನ್ನು ಕೈಗೊಳ್ಳಲು ಎಸ್.ಸಿ.ಪಿ.–ಟಿ.ಎಸ್.ಪಿ ಯೋಜನೆಯಡಿ ಲಭ್ಯವಿರುವ ಅನುದಾನದಲ್ಲಿ ಬಾಲಕ ಮತ್ತು ಬಾಲಕಿಯರ ವಸತಿನಿಲಯಗಳಲ್ಲಿ ನಿರ್ವಾಹಣೆ ಕಾಮಗಾರಿಯನ್ನು ಕೈಗೊಂಡು, ಕಾಲೇಜು ಕಟ್ಟಡದ ನಿರ್ವಹಣೆ ಕಾಮಗಾರಿಯನ್ನು ಸಂಸ್ಥೆಯ ವಿವಿಧ ಲೆಕ್ಕ–ಶೀರ್ಷಿಕೆಯಡಿ ಲಭ್ಯವಿರುವ ಅನುದಾನವನ್ನು ಬಳಸಿಕೊಂಡು ಅಗತ್ಯ ಕಾಮಗಾರಿಯನ್ನು ಕೈಗೊಳ್ಳುವುದೆಂದು ತೀರ್ಮಾನಿಸಿರುವುದರ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿ ಸದರಿ ತೀರ್ಮಾನವನ್ನು |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ಸರ್ವಾನುಮತದಿಂದ ಒಪ್ಪಿ ಕೂಡಲೇ ಈ ಬಗ್ಗೆ ಕ್ರಮ ವಹಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು.<br>**ಅಜೆಂಡಾ ಕ್ರಮ ಸಂಖ್ಯೆ: 12ರಲ್ಲಿ** ಸಂಸ್ಥೆಯ ವಿವಿಧ ವಿಭಾಗಗಳಲ್ಲಿದ್ದ ಕೆಲವು ಉಪಕರಣಗಳು, ಪೀಠೋಪಕರಣಗಳು ಹಾಗೂ ಇತರೆ ಸಾಮಗ್ರಿಗಳು ಮುರಿದು ಹೋಗಿದ್ದು ಅನುಪಯುಕ್ತ ವಸ್ತುಗಳೆಂದು ಪರಿಗಣಿಸಿ ಶೇಖರಣೆ ಮಾಡಲಾಗಿದ್ದಿತು. ಅವುಗಳನ್ನು ರೂ.4.82 ಲಕ್ಷಗಳ ವೆಚ್ಚದಲ್ಲಿ ರಿಪೇರಿ ಮಾಡಿಸಲು ಸಂಸ್ಥೆಯ ಆರ್ಥಿಕ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದು ರಿಪೇರಿ ಮಾಡಿಸಿ ಸದ್ಬಳಕೆ ಮಾಡಿಕೊಂಡಿರುವ ಸವಿವರವಾದ ಮಾಹಿತಿಯನ್ನು ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು ಲ್ಯಾಪ್‌ಟಾಪ್ ಮೂಲಕ ಪ್ರತ್ಯಾಕ್ಷತೆಗೆ ಒಳಪಡಿಸಿದರು. ಸದರಿ ವೆಚ್ಚವನ್ನು ಒಪ್ಪಿ ಅನುಮೋದಿಸಲಾಯಿತು.<br>ಇದೇ ರೀತಿಯಾಗಿ ಇನ್ನು ಕೆಲವು ಪೀಠೋಪಕರಣಗಳು ಮತ್ತು ಸಾಮಗ್ರಿಗಳಿದ್ದು ಇವುಗಳನ್ನು ಸಹ ರಿಪೇರಿ ಮಾಡಿಸಿ ಉಪಯೋಗಿಸಿ ಕೊಳ್ಳಬಹುದಾಗಿದ್ದು, ತಗಲುವ ವೆಚ್ಚಕ್ಕೆ ಅನುಮೋದನೆ ನೀಡುವಂತೆ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು, ಸಭೆಯನ್ನು ಕೋರಲಾಗಿ ಸದರಿಯವರ ಕೋರಿಕೆಯನ್ನು ಒಪ್ಪಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವಂತೆ ಮುಖ್ಯ ಆಡಳಿತಾಧಿಕಾರಿಗಳಿಗೆ ಸೂಚಿಸಲಾಯಿತು. |
| 03 | ದಿನಾಂಕ:24–06–2017ರಂದು ನಡೆದ 9ನೇ ಕಾಮಗಾರಿ ಸಮಿತಿ ಸಭೆಯ ಸಭಾ ನಡವಳಿಗಳನ್ನು ಓದಿ ಅನುಮೋದಿಸುವ ಬಗ್ಗೆ. | ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಆಕುಕ, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ:24–06–2017 ರಂದು ನಡೆದ 9ನೇ ಕಾಮಗಾರಿ ಸಮಿತಿ ಸಭೆಯಲ್ಲಿ 02 ವಿಷಯಗಳ ಬಗ್ಗೆ ಚರ್ಚಿಸಿ ತೆಗೆದುಕೊಂಡ ನಿರ್ಣಯಗಳ ಸಭಾ ನಡವಳಿಯನ್ನು ಅನುಮೋದನೆಗಾಗಿ ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು. ಸದರಿ ಸಭೆಯ ನಡವಳಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. ಈ ಪೈಕಿ ಈ ಕೆಳಕಂಡ<br>**ಅಜೆಂಡಾ ಕ್ರಮ ಸಂಖ್ಯೆ:02(1)ರಲ್ಲಿ ಸರ್ಕಾರವು** ಎಮ್.ಬಿ.ಬಿ.ಎಸ್. ಸೀಟುಗಳ ಸಂಖ್ಯೆಯನ್ನು 100 ರಿಂದ 150ಕ್ಕೆ ಹೆಚ್ಚಿಸಿರುವುದರಿಂದ ಎಮ್.ಬಿ.ಬಿ.ಎಸ್. ವಿದ್ಯಾರ್ಥಿಗಳಿಗೆ ಹೆಚ್ಚುವರಿಯಾಗಿ ವಸತಿ ನಿಲಯದ ಸೌಕರ್ಯಗಳನ್ನು ತುರ್ತಾಗಿ ಕಲ್ಪಿಸಲು ಲೋಕೋಪಯೋಗಿ ಇಲಾಖೆಯವರು ರೂ.2200.00 ಲಕ್ಷಗಳಿಗೆ ಅಂದಾಜು ಪಟ್ಟಿ ಸಲ್ಲಿಸಿರುವುದರ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿ ಈಗಾಗಲೇ ವಿದ್ಯಾರ್ಥಿಗಳ ದಾಖಲಾತಿ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ.

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ಪ್ರಾರಂಭವಾಗಿರುವುದರಿಂದ ವಸತಿ ನಿಲಯದಲ್ಲಿ ಸ್ಥಳಾವಕಾಶ ಕೊರತೆಯಾಗುತ್ತದೆಂದು ಪರಿಗಣಿಸಿ ಎಸ್‌ಸಿಪಿ –ಟಿಎಸ್‌ಪಿ ಯೋಜನೆ ಯಡಿ ಬಿಡುಗಡೆಯಾಗಿ ಉಳಿದಿರುವ ಸುಮಾರು ರೂ.320 ಲಕ್ಷಗಳ ಅನುದಾನವನ್ನು ವಿದ್ಯಾರ್ಥಿಗಳ ವಸತಿ ನಿಲಯ ಕಟ್ಟಡ ನಿರ್ಮಾಣಕ್ಕೆ ಬಳಸಿಕೊಂಡು ಕೂಡಲೇ ಕಟ್ಟಡ ನಿರ್ಮಾಣ ಕೈಗೊಳ್ಳುವುದೆಂದು ತೀರ್ಮಾನಿಸಿ ಈ ಬಗ್ಗೆ ಅನುಮೋದನೆಗಾಗಿ ಹಾಗೂ ಕೊರತೆಯಾಗುವ ಉಳಿದ ಅನುದಾನಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದೆಂದು ತೀರ್ಮಾನಿಸಲಾಯಿತು. ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 04 | ದಿನಾಂಕ:24.04.2017ರಂದು ನಡೆದ 14ನೇ ಖರೀದಿ ಸಮಿತಿ, ದಿನಾಂಕ 20.06.2017ರಂದು ನಡೆದ 15ನೇ ಖರೀದಿ ಸಮಿತಿ ಮತ್ತು ದಿನಾಂಕ: 08–08–2017 ರಂದು ನಡೆದ 16ನೇ ಖರೀದಿ ಸಮಿತಿ ಸಭೆಯ ನಡವಳಿಗಳನ್ನು ಓದಿ ಅನುಮೋದಿಸುವ ಬಗ್ಗೆ. | ಮಾನ್ಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ:24.04.2017ರಂದು ನಡೆದ 14ನೇ ಖರೀದಿ ಸಮಿತಿ ಸಭೆಯಲ್ಲಿ 07 ವಿಷಯಗಳ ಬಗ್ಗೆ, ದಿನಾಂಕ 20.06.2017ರಂದು ನಡೆದ 15ನೇ ಖರೀದಿ ಸಮಿತಿ ಸಭೆಯಲ್ಲಿ 04 ವಿಷಯಗಳ ಬಗ್ಗೆ, ದಿನಾಂಕ: 08–08–2017 ರಂದು ನಡೆದ 16ನೇ ಖರೀದಿ ಸಮಿತಿ ಸಭೆಯಲ್ಲಿ 08 ವಿಷಯಗಳ ಬಗ್ಗೆ ಚರ್ಚಿಸಿ ತೆಗೆದುಕೊಂಡ ನಿರ್ಣಯಗಳ ಸಭಾ ನಡವಳಿಯನ್ನು ಅನುಮೋದನೆಗಾಗಿ ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು. ಸದರಿ ಸಭೆಯ ನಡವಳಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |
| 05 | ದಿನಾಂಕ:20.04.2017 ರಂದು ನಡೆದ ಸಂಸ್ಥೆಯ ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ನಡೆದ ನೇರ ನೇಮಕಾತಿ ಸಂದರ್ಶನದಲ್ಲಿ ಆಯ್ಕೆಯಾಗಿ ನೇಮಕಾತಿ ಹೊಂದಿರುವ ಅಭ್ಯರ್ಥಿಗಳ ಪಟ್ಟಿಗೆ ಅನುಮೋದನೆ ಪಡೆಯುವ ಬಗ್ಗೆ. | ಸಂಸ್ಥೆಯಲ್ಲಿ ಖಾಲಿ ಇದ್ದಂತಹ ಬೋಧಕ ಹುದ್ದೆಗಳಾದ ಪ್ರಾಧ್ಯಾಪಕರು : 02, ಸಹ ಪ್ರಾಧ್ಯಾಪಕರು : 02, ಸಹಾಯಕ ಪ್ರಾಧ್ಯಾಪಕರು :05, ಹಿರಿಯ ಸ್ಥಾನೀಯ ವೈದ್ಯರು : 06, ಮತ್ತು ಬೋಧಕೇತರ ಹುದ್ದೆಯಾದ ಕ್ಲಿನಿಕಲ್ ಸೈಕಾಲಾಜಿಸ್ಟ್ :04 ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇವರಿಂದ ಏಕ ಕಡತದಲ್ಲಿ ಅನುಮೋದನೆ ಪಡೆದು ದಿನಾಂಕ:04.04.2017 ರಂದು ನೇರ ಸಂದರ್ಶನಕ್ಕೆ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿರುತ್ತದೆ.<br><br>ಸಂಸ್ಥೆಯ ಬೈಲಾ 2013 ನಿಯಮ– 12(3) ಮತ್ತು 12(5)ರಡಿ ರಚಿತವಾದ ಆಯ್ಕೆ ಸಮಿತಿಯು, ದಿನಾಂಕ:20.01.2017ರಂದು ನಿರ್ದೇಶಕರ ಕಛೇರಿ ಹಿಮ್ಸ್, ಹಾಸನ ಇಲ್ಲಿ ನೇರ ಸಂದರ್ಶನ ನಡೆಸಿ ಮೆರಿಟ್ ಮತ್ತು ರೋಸ್ಟರ್ ಆಧಾರದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿ ನಿಯಮಾನುಸಾರ ಆಕ್ಷೇಪಣೆಗೆ ಕಾಲವಕಾಶ ನೀಡಿ ತದನಂತರ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|

ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಗೆ ಸರ್ಕಾರದಿಂದ ಅನುಮೋದನೆ ಪಡೆಯಲು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಅಧ್ಯಕ್ಷರು, ಹಿಮ್ಸ್, ಆಡಳಿತ ಮಂಡಳಿ ಮತ್ತು ಸರ್ಕಾರದ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಹಾಗೂ ಉಪಾಧ್ಯಕ್ಷರು, ಹಿಮ್ಸ್, ಆಡಳಿತ ಮಂಡಳಿ ಇವರಿಗೆ ದಿನಾಂಕ:09.05.2017ರಂದು ಏಕ ಕಡತದಲ್ಲಿ ಆಯ್ಕೆಪಟ್ಟಿ ಸಲ್ಲಿಸಿ ಅನುಮೋದನೆ ಪಡೆಯಲಾಗಿರುತ್ತದೆ.

ಸರ್ಕಾರದ ಅನುಮೋದನೆಯಂತೆ ಆಯ್ಕೆಯಾದ ಬೋಧಕ ಮತ್ತು ಬೋಧಕೇತರ ಅಭ್ಯರ್ಥಿಗಳಿಗೆ ಆಡಳಿತ ಮಂಡಳಿ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ನೇಮಕಾತಿ ಆದೇಶ ಜಾರಿಗೊಳಿಸಿದ್ದು, ಆಯ್ಕೆಯಾದ ಕೆಳಕಂಡ ಅಭ್ಯರ್ಥಿಗಳು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆಂದು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.

**ಪ್ರಾಧ್ಯಾಪಕರ ಹುದ್ದೆಗೆ ಆಯ್ಕೆಯಾಗಿರುವವರ ಪಟ್ಟಿ:**

| ಕ್ರ.ಸಂ. | ಹೆಸರು | ಆಯ್ಕೆಯಾದ ಮೀಸಲಾತಿ | ಆಯ್ಕೆಯಾದ ವಿಭಾಗ |
|---|---|---|---|
| 01 | ಡಾ.ಸುನೀಲ್.ಸಿ.ಅರಮನಿ | ಸಾಮಾನ್ಯ-ಸಾಮಾನ್ಯ | ನ್ಯಾಯ ವೈದ್ಯಶಾಸ್ತ್ರ |

**ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಆಯ್ಕೆಯಾಗಿರುವವರ ಪಟ್ಟಿ:**

| ಕ್ರ.ಸಂ. | ಹೆಸರು | ಆಯ್ಕೆಯಾದ ಮೀಸಲಾತಿ | ಆಯ್ಕೆಯಾದ ವಿಭಾಗ |
|---|---|---|---|
| 01 | ಡಾ.ನಿತಿನ್ ಕುಮಾರ್ ಚೌವಾಣ್ | ಪ.ಜಾ – ಹೈಕ | ಶಸ್ತ್ರ ಚಿಕಿತ್ಸಾ |
| 02 | ಡಾ.ಪ್ರೀತಾ ನಾಯ್ಕ್ | ಸಾಮಾನ್ಯ – ಮಹಿಳೆ | ರೋಗ ಲಕ್ಷಣಶಾಸ್ತ್ರ |
| 03 | ಡಾ.ರವೀಂದ್ರ.ಎನ್ | ಸಾಮಾನ್ಯ – ಗ್ರಾಮೀಣ | ವೈದ್ಯಶಾಸ್ತ್ರ ವಿಭಾಗ |

**ಹಿರಿಯ ಸ್ಥಾನೀಯ ವೈದ್ಯರ ಹುದ್ದೆಗೆ ಆಯ್ಕೆಯಾಗಿರುವವರ ಪಟ್ಟಿ:**

| ಕ್ರ.ಸಂ. | ಹೆಸರು | ಆಯ್ಕೆಯಾದ ಮೀಸಲಾತಿ | ಆಯ್ಕೆಯಾದ ವಿಭಾಗ |
|---|---|---|---|
| 01 | ಡಾ.ಕಿರಣ್.ಬಿ.ಎಸ್ | ಸಾಮಾನ್ಯ – ಮಹಿಳೆ ಎದುರು | ಶಸ್ತ್ರ ಚಿಕಿತ್ಸಾ |
| 02 | ಡಾ.ವೆಂಕಟೇಶ್ | 2ಎ – ಮಹಿಳೆ ಎದುರು | ವೈದ್ಯಶಾಸ್ತ್ರ |

**ಆಡಿಯೋಮೀಟರ್ ಟೆಕ್ನೀಷಿಯನ್ ಹುದ್ದೆಗೆ ಆಯ್ಕೆಯಾಗಿರುವವರ ಪಟ್ಟಿ:**

| ಕ್ರ.ಸಂ. | ಹೆಸರು | ಆಯ್ಕೆಯಾದ ಮೀಸಲಾತಿ | ಆಯ್ಕೆಯಾದ ವಿಭಾಗ |
|---|---|---|---|
| 01 | ಭಾಗ್ಯ.ಎಂ | ಪ.ಜಾ – ಮಹಿಳೆ | ಕಿವಿ, ಮೂಗು ಮತ್ತು ಗಂಟಲು |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | **ಸ್ಪೀಚ್ ಥೆರಪಿಸ್ಟ್ ಹುದ್ದೆಗೆ ಆಯ್ಕೆಯಾಗಿರುವವರ ಪಟ್ಟಿ:**<br><table><tr><th>ಕ್ರ.ಸಂ.</th><th>ಹೆಸರು</th><th>ಆಯ್ಕೆಯಾದ ಮೀಸಲಾತಿ</th><th>ಆಯ್ಕೆಯಾದ ವಿಭಾಗ</th></tr><tr><td>01</td><td>ರಾಕೇಶ್.ಪಿ.ಜಿ</td><td>ಸಾಮಾನ್ಯ – ಸಾಮಾನ್ಯ</td><td>ಕಿವಿ, ಮೂಗು ಮತ್ತು ಗಂಟಲು</td></tr><tr><td>02</td><td>ಸಿಂಧುಪ್ರಿಯಾ.ಸಿ</td><td>ಪ.ಜಾ – ಸಾಮಾನ್ಯ</td><td>ಕಿವಿ, ಮೂಗು ಮತ್ತು ಗಂಟಲು</td></tr></table>ಸಂಸ್ಥೆಯ ಬೈಲಾದಂತೆ ನೇಮಕಾತಿ ಸಮಿತಿಯು ನೇರ ಸಂದರ್ಶನ ನಡೆಸಿ ಮೆರಿಟ್ ಮತ್ತು ರೋಸ್ಟರ್ ಆಧಾರದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಿರುವುದನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |
| 06 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರದಿಂದ ಸಂಸ್ಥೆಯ ಆವರಣದಲ್ಲಿ **"ನಾಗರೀಕ ಸೌಲಭ್ಯಗಳ ಸಂಕೀರ್ಣ"**ನಿರ್ಮಿಸಲು ಅನುಮೋದನೆ ನೀಡುವ ಬಗ್ಗೆ. (ಉಪಹಾರ ಮಂದಿರ/ ಹಾಲುಮಾರಾಟ/ ಹಣ್ಣಿನಮಳಿಗೆ /ಶೌಚಾಲಯ) | ಸರ್ಕಾರದಿಂದ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಕ್ಯಾಂಟೀನ್, ಹಣ್ಣಿನಮಳಿಗೆ, ಕೆ.ಎಂ.ಫ್. ಮಳಿಗೆಗಳನ್ನೊಳಗೊಂಡಂತೆ, ಕಟ್ಟಡ ಸಂಕೀರ್ಣ ನಿರ್ಮಾಣ ಕಾಮಗಾರಿಗೆ ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯಡಿ ಆಡಳಿತಾತ್ಮಕ ಅನುಮೋದನೆ ಪಡೆದು ಆಧುನಿಕ ತಂತ್ರಜ್ಞಾನವಾದ Fast Track Technologyಯನ್ನು ಬಳಸಿಕೊಂಡು "ನಾಗರೀಕ ಸೌಲಭ್ಯಗಳ ಸಂಕೀರ್ಣ" ನಿರ್ಮಿಸಲು ಕೆ.ಹೆಚ್.ಎಸ್.ಡಿ.ಆರ್.ಪಿ ಇಲಾಖೆಯವರಿಗೆ ವಹಿಸಿರುತ್ತದೆ. ಸರ್ಕಾರದ ಯೋಜನೆಯನ್ನು ಯಶಸ್ವಿಗೊಳಿಸುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ ಬೆಂಗಳೂರುರವರು ಅ.ಸ.ಪತ್ರ ಸಂಖ್ಯೆ: ಆಕುಕ 313 ಪ್ರಕಾ: 2017, ದಿನಾಂಕ: 03-05-2017 ರಂದು ಆದೇಶ ಹೊರಡಿಸಿರುತ್ತಾರೆ.<br>ಸದರಿ ಆದೇಶದಂತೆ ಹೊಸ ಆಸ್ಪತ್ರೆ ಕಟ್ಟಡದ ಮುಂಭಾಗದಲ್ಲಿ ಕಟ್ಟಡದ ವಿನ್ಯಾಸಕ್ಕೆ ಯಾವುದೇ ಲೋಪವಾಗದಂತೆ ಹಾಗೂ ರೋಗಿಗಗಳು ಮತ್ತು ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಅನಾನುಕೂಲಗಳು ಉಂಟಾಗದಂತೆ ಸದರಿ ಉದೇಶಕ್ಕೆ ಸೂಕ್ತವೆನ್ನಿಸಿದ ಖಾಲಿ ನಿವೇಶನದಲ್ಲಿ 45**x**45 ಅಳತೆಯ ವಿಸ್ತೀರ್ಣದಲ್ಲಿ ಕಟ್ಟಡ ಕಾಮಗಾರಿಯು ಪ್ರಾರಂಭವಾಗಿರುವುದರ ಬಗ್ಗೆ ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸಾರ್ವಜನಿಕ ಅನುಕೂಲಕ್ಕಾಗಿ ಆಸ್ಪತ್ರೆಯ ಆವರಣದಲ್ಲಿ "ನಾಗರೀಕ ಸೌಲಭ್ಯಗಳ ಸಂಕೀರ್ಣ" ಕಟ್ಟಡ ನಿರ್ಮಾಣಕ್ಕೆ 45**x**45 ಅಳತೆಯ ಖಾಲಿ ನಿವೇಶನವನ್ನು ಸಂಸ್ಥೆಯಿಂದ ನೀಡಿರುವುದನ್ನು ಕೆಲವು ಷರತ್ತಿಗೆ ಒಳಪಟ್ಟು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ಅಂದರೆ ಸದರಿ ಕಟ್ಟಡದ ಕಾಮಗಾರಿಯು ಪೂರ್ಣಗೊಂಡು ಹಿಮ್ಸ್ ಸಂಸ್ಥೆಗೆ ಹಸ್ತಾಂತರವಾದ ನಂತರ ಕಟ್ಟಡದಲ್ಲಿ ನಿರ್ಮಾಣವಾಗುವ ಮಳಿಗೆಗಳನ್ನು ನೇರವಾಗಿ ಯಾವುದೇ ವ್ಯಕ್ತಿಗಳು /ಸಂಘ-ಸಂಸ್ಥೆಗಳಿಗೆ ನೀಡದೆ ಸಂಬಂಧಪಟ್ಟ ಉದ್ದೇಶಗಳಿಗೆ ಅನುಗುಣವಾಗಿ ಕೆ.ಟಿ.ಟಿ.ಪಿ ನಿಯಮನುಸಾರ ಇ-ಟೆಂಡರ್ ಕರೆದು ಸರ್ಕಾರದಿಂದ ಅನುಮೋದನೆ ಪಡೆದು ನಂತರ ಬಾಡಿಗೆ ನೀಡುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 07 | ಹಾಸನಾಂಭ ಧರ್ಮಛತ್ರ ಸಮಿತಿಯವರಿಗೆ ಸಂಸ್ಥೆಯ ಆವರಣದಲ್ಲಿ ಧರ್ಮಛತ್ರ ನಿರ್ಮಿಸಲು ಆಡಳಿತ ಮಂಡಳಿ ತೀರ್ಮಾನದಂತೆ ಸಂಸ್ಥೆಯ ಆವರಣದಲ್ಲಿ 60x40 ಅಳತೆಯ ಖಾಲಿ ನಿವೇಶನದಲ್ಲಿ ಕಟ್ಟಡ ನಿರ್ಮಾಣಕ್ಕೆ ಅವಕಾಶ ನೀಡಿರುವುದನ್ನು ಅನುಮೋದಿಸುವ ಬಗ್ಗೆ. | ಹಾಸನಾಂಭ ಧರ್ಮಛತ್ರ ಸಮಿತಿ, ಹಾಸನ ಇವರು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸಂಸ್ಥೆಯ ಆವರಣದಲ್ಲಿ ಉಚಿತವಾಗಿ ಧರ್ಮಛತ್ರ ಕಟ್ಟಡ ನಿರ್ಮಿಸಿ ಸಂಸ್ಥೆಗೆ ಹಸ್ತಾಂತರಿಸುವುದಾಗಿ ಸಲ್ಲಿಸಿದ್ದ ಮನವಿಯನ್ನು ಸಂಸ್ಥೆಯ 15ನೇ ಆರ್ಥಿಕ ಸಮಿತಿ ಮತ್ತು 28ನೇ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆ. ಆಡಳಿತ ಮಂಡಳಿಯ ತೀರ್ಮಾನದಂತೆ ಉದ್ದೇಶಿತ ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಸಂಬಂಧ ಉಪವಿಭಾಗಾಧಿಕಾರಿಗಳು, ಹಾಸನ, ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ, ಹಾಸನ ಮತ್ತು ಸಂಸ್ಥೆಯ ಮೇಲಾಧಿಕಾರಿಗಳ ನೇತೃತ್ವದಲ್ಲಿ ಸ್ಥಳ ಪರಿಶೀಲನೆ ನಡೆಸಿ ಕಟ್ಟಡದ ವಿನ್ಯಾಸಕ್ಕೆ ಯಾವುದೇ ಲೋಪವಾಗದಂತೆ ಹಾಗೂ ರೋಗಿಗಳು ಮತ್ತು ವಿದ್ಯಾರ್ಥಿಗಳಿಗೆ ಯಾವುದೇ ರೀತಿಯಾ ಅನಾನುಕೂಲಗಳು ಉಂಟಾಗದಂತೆ ಉದ್ದೇಶಿತ ಸ್ಥಳದಲ್ಲಿ ಧರ್ಮಛತ್ರ ಕಟ್ಟಡ ನಿರ್ಮಿಸಲು 60x40ಅಳತೆಯ ಖಾಲಿ ನಿವೇಶನವನ್ನು ಹಾಸನಾಂಭ ಧರ್ಮಛತ್ರ ಸಮಿತಿ, ಹಾಸನ ಇವರಿಗೆ ನೀಡಲಾಗಿದ್ದು, ಈಗಾಗಲೇ ಕಾಮಗಾರಿಯು ಪ್ರಗತಿಯ ಹಂತದಲ್ಲಿರುತ್ತದೆಂದು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸಾರ್ವಜನಿಕ ಅನುಕೂಲಕ್ಕಾಗಿ ಆಸ್ಪತ್ರೆಯ ಆವರಣದಲ್ಲಿ ಧರ್ಮಛತ್ರ ನಿರ್ಮಾಣಕ್ಕೆ 60x40 ಅಳತೆಯ ಖಾಲಿ ನಿವೇಶನವನ್ನು ನೀಡಿದ್ದು, ಸದರಿ ಸ್ಥಳದಲ್ಲಿ ಧರ್ಮಛತ್ರ ಕಟ್ಟಡ ನಿರ್ಮಿಸುತ್ತಿರುವುದನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು.<br>ಮುಂದುವರೆದು ಕಟ್ಟಡ ಕಾಮಗಾರಿಯು ಪೂರ್ಣಗೊಂಡ ನಂತರ ಹಾಸನಾಂಭ ಧರ್ಮಛತ್ರ ಸಮಿತಿ, ಹಾಸನ ಇವರಿಂದ ಕಟ್ಟಡವನ್ನು ಹಿಮ್ಸ್ ಸಂಸ್ಥೆಗೆ ಹಸ್ತಾಂತರ ಪಡೆದು |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಅಜೆಂಡಾ ಕ್ರ.ಸಂ.</th><th>ವಿಷಯ</th><th>ತೀರ್ಮಾನ</th></tr>
<tr><td></td><td></td><td>ಸಂಸ್ಥೆಯ ವತಿಯಿಂದಲೇ ಸದರಿ ಕಟ್ಟಡದ ಮೇಲ್ವಿಚಾರಣೆಯಲ್ಲಿ ಯಾವುದೇ ಲೋಪಗಳು ಉಂಟಾಗದಂತೆ ನೋಡಿಕೊಳ್ಳಲು ಅಗತ್ಯ ಕ್ರಮವಹಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು.</td></tr>
<tr><td>08</td><td>ಡಾ.ಪ್ರಕಾಶ್.ಬಿ.ಎಸ್, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು ಅಂಗರಚನಾಶಾಸ್ತ್ರ ವಿಭಾಗ, ಡಾ.ವಿಠಲ್.ಬಿ.ಜಿ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು ಜೀವರಾಸಾಯನ ಶಾಸ್ತ್ರ ವಿಭಾಗ, ಇವರುಗಳು 02 ವರ್ಷಗಳ ಸೇವಾವಧಿಯನ್ನು ಪೂರೈಸಿರುವುದರಿಂದ ಖಾಯಂ ಪೂರ್ವ ಸೇವಾವಧಿಯನ್ನು ಘೋಷಣೆ ಮಾಡುವ ಬಗ್ಗೆ.</td><td>ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಈ ಕೆಳಕಂಡ ಬೋಧಕ ಸಿಬ್ಬಂದಿಗಳು ಕೆ.ಸಿ.ಎಸ್.ಆರ್ ನಿಯಮಾವಳಿ ಹಾಗೂ ಸಂಸ್ಥೆಯ ಬೈಲಾ ಪ್ರಕಾರ 02 ವರ್ಷಗಳ ಸೇವಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿದ್ದು, ಸದರಿ ವೈದ್ಯರುಗಳು ಎಸ್.ಎಸ್.ಎಲ್.ಸಿ ಯಲ್ಲಿ ಕನ್ನಡವನ್ನು ಪ್ರಥಮ ಭಾಷೆಯಾಗಿ ತೇರ್ಗಡೆ ಹೊಂದಿರುತ್ತಾರೆ ಹಾಗೂ ಇಲಾಖಾ ಪರೀಕ್ಷೆಯನ್ನು ಪಾಸು ಮಾಡಿರುತ್ತಾರೆ. ಇವರುಗಳ ವಿರುದ್ದ ಯಾವುದೇ ಇಲಾಖಾ ವಿಚಾರಣೆ ಬಾಕಿ ಇರುವುದಿಲ್ಲ. ಸದರಿ ವೈದ್ಯರುಗಳಿಗೆ ಖಾಯಂ ಪೂರ್ವ ಸೇವಾವಧಿ ಘೋಷಣೆ ಮಾಡುವ ಬಗ್ಗೆ ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.
<table>
<tr><th>ಕ್ರ. ಸಂ</th><th>ಹೆಸರು ಮತ್ತು ಪದನಾಮ</th><th>ಸೇವೆಗೆ ಸೇರಿದ ದಿನಾಂಕ</th><th>ಖಾಯಂ ಪೂರ್ವ ಸೇವಾವಧಿ ಪೂರ್ಣಗೊಳಸಿದ ದಿನಾಂಕ</th></tr>
<tr><td>1</td><td>ಡಾ.ಪ್ರಕಾಶ್.ಬಿ.ಎಸ್., ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು,</td><td>01.04.2015 ರ ಪೂರ್ವಾಹ್ನ</td><td>01.04.2017 ರ ಅಪರಾಹ್ನ</td></tr>
<tr><td>2</td><td>ಡಾ.ವಿಠಲ್.ಬಿ.ಜಿ., ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು,</td><td>06.04.2015 ರ ಪೂರ್ವಾಹ್ನ</td><td>06.04.2017 ರ ಅಪರಾಹ್ನ</td></tr>
</table>
ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಮೇಲ್ಕಂಡ ಬೋಧಕ ಸಿಬ್ಬಂದಿಗಳು ತೃಪ್ತಿಕರವಾಗಿ 2 ವರ್ಷಗಳ ಸೇವಾವಧಿಯನ್ನು ಪೂರೈಸಿರುವುದರಿಂದ ಖಾಯಂ ಪೂರ್ವ ಸೇವಾವಧಿ ಘೋಷಣೆ ಮಾಡುವುದೆಂದು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು.<br>
ಇನ್ನು ಮುಂದೆ ಎರಡು ವರ್ಷಗಳ ಸೇವಾವಧಿಯನ್ನು ತೃಪ್ತಿಕರವಾಗಿ ಪೂರೈಸಿದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಖಾಯಂ ಪೂರ್ವಾಸೇವಾವಧಿಯನ್ನು ಸಂಸ್ಥೆಯ ಹಂತದಲ್ಲಿಯೇ ಘಟನೋತ್ತರವಾಗಿ ಘೋಷಣೆ ಮಾಡಿ ನಂತರ ಆಡಳಿತ</td></tr>
</table>

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಅಜೆಂಡಾ ಕ್ರ.ಸಂ.</th><th>ವಿಷಯ</th><th>ತೀರ್ಮಾನ</th></tr>
<tr><td></td><td></td><td>ಮಂಡಳಿಯಿಂದ ಅನುಮೋದನೆ ಪಡೆದುಕೊಳ್ಳುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು.</td></tr>
<tr><td>09</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕೆಲವು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ತಮ್ಮ ವೈಯಕ್ತಿಕ ಕಾರಣಗಳಿಂದ ರಾಜೀನಾಮೆ ಪತ್ರ ಸಲ್ಲಿಸಿರುವುದನ್ನು ಅಂಗೀಕರಿಸುವ ಬಗ್ಗೆ.</td><td>ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕೆಲವು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ತಮ್ಮ ವೈಯಕ್ತಿಕ ಕಾರಣಗಳಿಂದಾಗಿ ತಾವು ಸಲ್ಲಿಸುತ್ತಿದ್ದ ಹುದ್ದೆಗೆ ರಾಜೀನಾಮೆ ಪತ್ರ ಸಲ್ಲಿಸಿರುತ್ತಾರೆ ಸದರಿ ಸಿಬ್ಬಂದಿಗಳ ರಾಜೀನಾಮೆ ಪತ್ರವನ್ನು ಅಂಗೀಕರಿಸಲು ಸಂಸ್ಥೆಯ ನಿರ್ದೇಶಕರು ಸಭೆ ಮುಂದೆ ಮಂಡಿಸಿದರು.
<table>
<tr><th>ಕ್ರಮ ಸಂಖ್ಯೆ</th><th>ನೌಕರರ ಹೆಸರು ಮತ್ತು ಹುದ್ದೆ</th><th>ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕ</th><th>ಕರ್ತವ್ಯದಿಂದ ಬಿಡುಗಡೆಗೊಂಡ ದಿನಾಂಕ</th></tr>
<tr><td>01</td><td>ಡಾ.ಚಂದನ್.ಸಿ.ಎಸ್<br>ಹಿರಿಯ ಸ್ಥಾನೀಯ ವೈದ್ಯರು<br>ಶಸ್ತ್ರ ಚಿಕಿತ್ಸಾ ವಿಭಾಗ</td><td>01.07.2017</td><td>24.04.2017</td></tr>
<tr><td>02</td><td>ಶ್ರೀ.ವಿ.ಹರಿಹರನ್<br>ಕ್ಲಿನಿಕಲ್ ಸೈಕಲಾಜಿಸ್ಟ್<br>ಮನೋರೋಗಚಿಕಿತ್ಸಾವಿಭಾಗ</td><td>09.02.2017</td><td>17.04.2017</td></tr>
<tr><td>03</td><td>ಶ್ರೀ. ಮಂಜುನಾಥ್ ಶುಶ್ರೂಷಕರು</td><td>15.03.2017</td><td>16.05.2017</td></tr>
<tr><td>04</td><td>ಕುಮಾರಿ ದಿವ್ಯ.ಈ.ಸಿ.,<br>ಲ್ಯಾಬ್ ಅಸಿಸ್ಟೆಂಟ್/ಅಟೆಂಡರ್</td><td>20.10.2011</td><td>01.06.2017</td></tr>
</table>
ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಮೇಲ್ಕಂಡ ಸಿಬ್ಬಂದಿಗಳು ತಮ್ಮ ವೈಯಕ್ತಿಕ ಹಿನ್ನೆಲೆಯಲ್ಲಿ ಸ್ವಯಂ ಪ್ರೇರಿತವಾಗಿ ಸಂಸ್ಥೆಗೆ ರಾಜೀನಾಮೆ ಸಲ್ಲಿಸಿರುವುದರಿಂದ ಮತ್ತು ಸದರಿ ನೌಕರರುಗಳಿಂದ ಸಂಸ್ಥೆಗೆ ಬರಬೇಕಾದ ಯಾವುದೇ ಬಾಕಿಗಳು ಇಲ್ಲದೆ ಇರುವುದರಿಂದ ಸದರಿ ಸಿಬ್ಬಂದಿಗಳ ರಾಜೀನಾಮೆಯನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು.</td></tr>
<tr><td>10</td><td>ಡಾ.ದೀಪಕ್. ಯು.ಜಿ, ಸಹಾಯಕ ಪ್ರಾಧ್ಯಾಪಕರು, ಪಲ್ಮನರಿ ವಿಭಾಗ, ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಇವರು ಹಿಮ್ಸ್ ಸಂಸ್ಥೆಗೆ ವರ್ಗಾವಣೆ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು, ಈ ಬಗ್ಗೆ ಕ್ರಮಕೈಗೊಳ್ಳುವಂತೆ ಸರ್ಕಾರದಿಂದ</td><td>ಡಾ.ದೀಪಕ್.ಯು.ಜಿ., ಸಹಾಯಕ ಪ್ರಾಧ್ಯಾಪಕರು, ಪಲ್ಮನರಿ ವಿಭಾಗ, ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಡಗು ಇಲ್ಲಿಂದ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇಲ್ಲಿಗೆ ವರ್ಗಾವಣೆ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು ಈ ವಿಷಯದ ಬಗ್ಗೆ ಸಂಸ್ಥೆಯ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸುವಂತೆ ಸರ್ಕಾರದಿಂದ ಪತ್ರಸಂಖ್ಯೆ:ಆಕುಕ 109 ಕೆವಿಎಂ 2017, ದಿನಾಂಕ:24.06.2017ರಲ್ಲಿ ನಿರ್ದೇಶನ ಬಂದಿರುತ್ತದೆಂದು ಸಂಸ್ಥೆಯ</td></tr>
</table>

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | ಬಂದಿರುವ ಪತ್ರದ ಬಗ್ಗೆ. | ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯು ಹೊಸದಾಗಿ ಪ್ರಾರಂಭವಾಗಿರುವ ಸಂಸ್ಥೆಯಾಗಿದ್ದು, ಇಲ್ಲಿಗೆ ಅರ್ಹ ಬೋದಕ ಸಿಬ್ಬಂದಿಗಳು ಲಭ್ಯವಾಗುತ್ತಿಲ್ಲವಾದುದರಿಂದ ಸದರಿ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಯವರನ್ನು ಇತರೆ ಸ್ವಾಯತ್ತ ಸಂಸ್ಥೆಗಳಿಗೆ ವರ್ಗಾವಣೆ ಮಾಡಿದಲ್ಲಿ ಹುದ್ದೆಗಳ ಕೊರತೆಯುಂಟಾಗಿ ಎಮ್.ಸಿ.ಐ.ನಿಂದ ಮಾನ್ಯತೆ ಪಡೆಯುವುದಕ್ಕೆ ತೊಂದರೆಯಾಗುವುದೆಂದು ಪರಿಗಣಿಸಿ ಸದರಿಯವರ ಮನವಿಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 11 | ಶ್ರೀ ರಾಘವೇಂದ್ರ, ಶುಶ್ರೂಷಕರು, ಹಿಮ್ಸ್, ಹಾಸನ ಇವರನ್ನು ಆರ್.ಜಿ..ಯು.ಹೆಚ್.ಎಸ್. ನಲ್ಲಿ ಖಾಲಿ ಇರುವ ಯಾವುದಾದರೂ ಹುದ್ದೆಗೆ ನಿಯೋಜಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಬಂದಿರುವ ಪತ್ರದ ಬಗ್ಗೆ. | ಶ್ರೀ ರಾಘವೇಂದ್ರ, ಶುಶ್ರೂಷಕರು ,ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ. ಇವರು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಯಾವುದಾದರೊಂದು ಹುದ್ದೆಗೆ ನಿಯೋಜಿಸಿಕೊಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು ಈ ಬಗ್ಗೆ ಸರ್ಕಾರದ ಪತ್ರ ಸಂಖ್ಯೆ ಆಕುಕ 123 ಕೆವಿಎಂ 2017, ದಿನಾಂಕ:23.05.2017ರಲ್ಲಿ ಇವರ ಸೇವೆಯನ್ನು ನಿಯೋಜನೆ ಮೇಲೆ ಬಿಟ್ಟುಕೊಡುವ ಬಗ್ಗೆ ಮತ್ತು ಇವರ ಸೇವೆಯನ್ನು ಪಡೆಯುವ ಬಗ್ಗೆ ಉಭಯ ಸಂಸ್ಥೆಗಳು ತಮ್ಮ ಸ್ಪಷ್ಟ ಅಭಿಪ್ರಾಯದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶಿಸಿರುವ ಸರ್ಕಾರದ ಪತ್ರವನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಶ್ರೀ ರಾಘವೇಂದ್ರ, ಇವರು ಹಿಮ್ಸ್ ಸಂಸ್ಥೆಯಲ್ಲಿ ಶುಶ್ರೂಷಕರಾಗಿ ಸೇವೆ ಸಲ್ಲಿಸುತ್ತಿದ್ದು ಸದರಿ ನೌಕರರ ನೇಮಕಾತಿ ಪ್ರಕರಣವು ಘನ ಉಚ್ಚ ನ್ಯಾಯಾಲಯದಲ್ಲಿರುವುದರಿಂದ ಸದರಿಯವರ ಮನವಿಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 12 | ಶ್ರೀಮತಿ ಶಶಿಕಲಾ ಪಾಟೀಲ್, ಶುಶ್ರೂಷಕಿ, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇವರನ್ನು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇಲ್ಲಿಗೆ ವರ್ಗಾಯಿಸಲು ಕೋರಿರುವ ಬಗ್ಗೆ. | ಶ್ರೀಮತಿ ಶಶಿಕಲಾ ಪಾಟೀಲ್, ಶುಶ್ರೂಷಕಿ ಇವರು ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಿಂದ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ ವರ್ಗಾವಣೆ ಹೊಂದಿ ಇದೀಗ ಮೈಸೂರು ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಿಂದ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವರ್ಗಾವಣೆ ಮಾಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು ಈ ವಿಷಯದ ಬಗ್ಗೆ ಸಂಸ್ಥೆಯ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸುವಂತೆ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ಸರ್ಕಾರದಿಂದ ಪತ್ರಸಂಖ್ಯೆ: ಆಕುಕ 208 ಎಂಎಸ್.ಎಫ್ 2017 ದಿ:05.07.2017.ರಂದು ಪತ್ರ ಬಂದಿರುತ್ತದೆಂದು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಶ್ರೀಮತಿ ಶಶಿಕಲಾ ಪಾಟೀಲ್, ಶುಶ್ರೂಷಕಿ ಇವರ ಸೇವೆಯನ್ನು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯವರು ಬಿಟ್ಟು ಕೊಡಲು ಒಪ್ಪಿದಲ್ಲಿ ಸದರಿಯವರನ್ನು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಶುಶ್ರೂಷಕರಾಗಿ ವರ್ಗಾವಣೆ ಮಾಡಿಕೊಳ್ಳಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 13 | ಶ್ರೀ.ಭೀಮರಾವ್ ಅಂಬೋಜಿಘಾಟೆ ಮತ್ತು ಶ್ರೀ.ಭಾನುಪ್ರಕಾಶ್ ಶುಶ್ರೂಷಕರುಗಳು ಇವರ ಪರಸ್ಪರ ವರ್ಗಾವಣೆಯ ಬಗ್ಗೆ. | ಶ್ರೀ.ಭೀಮರಾವ್ ಅಂಬೋಜಿಘಾಟೆ, ಇವರು ಬಾಗಲಕೋಟೆ ಜಿಲ್ಲೆ, ಬೀಳಗಿ ತಾಲ್ಲೂಕು ಅನಗವಾಡಿ ಗ್ರಾಮದವರಾಗಿದ್ದು, ಕೆ.ಇ.ಎ. ಮುಖಾಂತರ ಆಯ್ಕೆಯಾಗಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಶುಶ್ರೂಷಕರಾಗಿ ಆಯ್ಕೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದೇ ರೀತಿ ಶ್ರೀ.ಭಾನುಪ್ರಕಾಶ್ ಇವರು ಹಾಸನ ಜಿಲ್ಲೆಯವರಾಗಿದ್ದು. ಕೆ.ಇ.ಎ ಮುಖಾಂತರ ಆಯ್ಕೆಯಾಗಿ ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ ಇಲ್ಲಿಗೆ ಶುಶ್ರೂಷಕರಾಗಿ ಆಯ್ಕೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸದರಿ ನೌಕರರುಗಳಿಗೆ ವಯಸ್ಸಾದ ತಂದೆ-ತಾಯಿಗಳು ಮತ್ತು ಪತ್ನಿ ಮತ್ತು ಮಕ್ಕಳಿದ್ದು ಅವರುಗಳ ಪಾಲನೆಯನ್ನು ನೋಡಿಕೊಳ್ಳಬೇಕಾಗಿರುವುದರಿಂದ ಪರಸ್ಪರ ವರ್ಗಾವಣೆ ಮಾಡಿಕೊಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು ಸರ್ಕಾರದ ಪತ್ರ ಸಂಖ್ಯೆ ಆಕುಕ 120 ಕೆವಿಎಂ 2017, ದಿನಾಂಕ:24.05.2017ರಲ್ಲಿ ಪರಸ್ಪರ ವರ್ಗಾವಣೆಯ ಮನವಿಗಳನ್ನು ನಿಯಮಾನುಸಾರ ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯವನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸರ್ಕಾರದಿಂದ ಬಂದಿರುವ ಪತ್ರವನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಕೌಟಂಬಿಕ ಹಿನ್ನೆಲೆಯಲ್ಲಿ ಶ್ರೀ.ಭೀಮರಾವ್ ಅಂಬೋಜಿಘಾಟೆ, ಶುಶ್ರೂಷಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಸನ ಇವರನ್ನು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗಕ್ಕೆ ಹಾಗೂ ಶ್ರೀ.ಭಾನುಪ್ರಕಾಶ್, ಶುಶ್ರೂಷಕರು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ ಇವರನ್ನು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಸನ ಇಲ್ಲಿಗೆ ಪರಸ್ಪರ ವರ್ಗಾವಣೆ ಮಾಡುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 14 | ಶ್ರೀ.ಲೋಹಿತ್.ಪಿ., ಸ್ಪೀಚ್ ಥೆರಪಿಸ್ಟ್, ಕಿವಿ ಮೂಗು ಮತ್ತು ಗಂಟಲು ವಿಭಾಗ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇವರನ್ನು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿಗೆ ವರ್ಗಾವಣೆ ಮಾಡುವಂತೆ ಕೋರಿರುವ ಬಗ್ಗೆ. | ಶ್ರೀ ಲೋಹಿತ್ ಪಿ., ಸ್ಪೀಚ್ ಥೆರಪಿಸ್ಟ್, ಕಿವಿ ಮೂಗು ಮತ್ತು ಗಂಟಲು ವಿಭಾಗ ಹಾಸನ ಇವರು ವಯಸ್ಸಾದ ತಂದೆ-ತಾಯಿಯವರ ಆರೋಗ್ಯ ಮತ್ತು ಪೋಷಣೆ ಹಾಗೂ ಕೌಟಂಬಿಕ ತೊಂದರೆಗಳ ನಿಮಿತ್ತ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಿಂದ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿಗೆ ವರ್ಗಾವಣೆ ಮಾಡಿಕೊಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು, ಈ ಬಗ್ಗೆ ಪತ್ರ ಸಂಖ್ಯೆ ಆಕುಕ 237 ಎಂಎಸ್ಎಫ್ 2017, ದಿ:18.07.2017ರಲ್ಲಿ ಸಂಸ್ಥೆಯ ಬೈಲಾ ಹಾಗೂ ನಿಯಮಗಳನ್ವಯ ಪರಿಶೀಲಿಸಿ ಸದರಿಯವರ ವರ್ಗಾವಣೆಗೆ ಸಂಸ್ಥೆಯ ಸಹಮತವಿದ್ದಲ್ಲಿ ನಿರಕ್ಷೇಪಣಾ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಬಂದಿರುವ ಪತ್ರವನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಅವಗಾಹನೆಗೆ ತಂದು ಕಿವಿ ಮೂಗು ಮತ್ತು ಗಂಟಲು ವಿಭಾಗದ ಮುಖ್ಯಸ್ಥರು ಸಂಸ್ಥೆಯಲ್ಲಿ 03 ಸ್ಪೀಚ್ ಥೆರಪಿಸ್ಟ್, ಹುದ್ದೆ ಮಂಜೂರಾಗಿದ್ದು ಎಲ್ಲಾ ಹುದ್ದೆಗಳು ಭರ್ತಿಯಾಗಿರುವುದರಿಂದ ಇವರನ್ನು ವರ್ಗಾವಣೆ ಮಾಡಿದರು ವಿಭಾಗಕ್ಕೆ ಹೆಚ್ಚಿನ ತೊಂದರೆಯಾಗುವುದಿಲ್ಲವೆಂದು ಲಿಖಿತವಾಗಿ ಅಭಿಪ್ರಾಯ ನೀಡಿರುತ್ತಾರೆ ಸಂಸ್ಥೆಯ ಬೈಲಾ ಪುಟ ಸಂಖ್ಯೆ: 15ರಲ್ಲಿ ವಿಶೇಷ ಸಂದರ್ಭಗಳನ್ನು ಒಳಗೊಂಡ ಕಾರಣಗಳನ್ನು ಸರ್ಕಾರ ಪರಿಶೀಲಿಸಿ ವರ್ಗಾವಣೆಗೆ ಕ್ರಮವಹಿಸಬೇಕಾಗಿರುತ್ತದೆ. ಹಾಗೂ ಆಡಳಿತ ಮಂಡಳಿ ಸಭೆಯ ಅನುಮೋದನೆ ಪಡೆಯಬೇಕಾಗಿರುತ್ತದೆಂದು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ವಿಷಯವನ್ನು ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಕಿವಿ, ಮೂಗು ಗಂಟಲು ವಿಭಾಗದ ಮುಖ್ಯಸ್ಥರು ಶ್ರೀ.ಲೋಹಿತ್ ಪಿ., ಸ್ಪೀಚ್ ಥೆರಪಿಸ್ಟ್ ಇವರನ್ನು ವರ್ಗಾವಣೆ ಮಾಡುವುದರಿಂದ ವಿಭಾಗಕ್ಕೆ ತೊಂದರೆಯಾಗುವುದಿಲ್ಲವೆಂದು ಲಿಖಿತವಾಗಿ ಅಭಿಪ್ರಾಯ ನೀಡಿರುವುದರಿಂದ ಸದರಿ ನೌಕರರನ್ನು ಕೌಟಂಬಿಕ ಹಿನ್ನೆಲೆಯಲ್ಲಿ ಹಿಮ್ಸ್ ಸಂಸ್ಥೆಯಿಂದ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿಗೆ ವರ್ಗಾವಣೆ ಮಾಡುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 15 | ಸಂಸ್ಥೆಯ ವಿವಿಧ ಲೆಕ್ಕ ಶೀರ್ಷಿಕೆಯಡಿ ಇರುವ ಅನುದಾನಕ್ಕೆ ಬ್ಯಾಂಕ್‌ನಿಂದ ಬರುವ ಬಡ್ಡಿ ಹಣವನ್ನು ಸಂಬಂಧಿತ ವೆಚ್ಚಗಳಿಗಾಗಿಯೇ | ಸರ್ಕಾರದಿಂದ ವಿವಿಧ ಲೆಕ್ಕ-ಶೀರ್ಷಿಕೆಯಡಿ ಬಿಡುಗಡೆಯಾಗಿರುವ ಅನುದಾನಕ್ಕೆ ಬ್ಯಾಂಕ್‌ನಿಂದ ನೀಡಿರುವ ಬಡ್ಡಿ ಹಣವನ್ನು ಉಪಯೋಗಿಸಿಕೊಳ್ಳದಿರುವ ಬಗ್ಗೆ ಮಹಾಲೇಖಪಾಲಕರು, ಕರ್ನಾಟಕ ವೃತ್ತ, ಬೆಂಗಳೂರು ಇವರು ಆಡಿಟ್ ವರದಿಯ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ನಿರ್ದೇಶಕರ ಕಛೇರಿ ಹಿಮ್ಸ್, ಹಾಸನ

<table>
<tr><th>ಅಜೆಂಡಾ ಕ್ರ.ಸಂ.</th><th>ವಿಷಯ</th><th>ತೀರ್ಮಾನ</th></tr>
<tr><td></td><td>ಬಳಸಿಕೊಳ್ಳುವ ಬಗ್ಗೆ.</td><td>ಸೆಕ್ಷನ್–ಎ (III)(ii) ಮತ್ತು ಸೆಕ್ಷನ್–ಬಿ (V) ರಲ್ಲಿ ಆಕ್ಷೇಪಣೆ ವ್ಯಕ್ತಪಡಿಸಿರುವುದನ್ನು ಮತ್ತು ವಿವಿಧ ಲೆಕ್ಕ–ಶೀರ್ಷಿಕೆಯಡಿ ಸಂಗ್ರಹವಾಗಿರುವ ಬ್ಯಾಂಕ್ ಬಡ್ಡಿಯ ಹಣವನ್ನು ಉಪಯೋಗಿಸಿಕೊಳ್ಳುವುದರ ಬಗ್ಗೆ ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.
<table>
<tr><th colspan="3">ಲೆಕ್ಕ ಶೀರ್ಷಿಕೆ</th></tr>
<tr><td>ಅ</td><td colspan="2">SCP-TSP ಮತ್ತು ವಿವಿಧ ಆರೋಗ್ಯ ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನಕ್ಕೆ ಬ್ಯಾಂಕ್ ನಿಂದ ನೀಡಿರುವ ಬಡ್ಡಿ ವಿವರ</td></tr>
<tr><td>1</td><td>SCP-TSP ಅನುದಾನದಿಂದ</td><td>1,12,42,984.00</td></tr>
<tr><td>2</td><td>ವಾಜಪೇಯಿ ಆರೋಗ್ಯ ಶ್ರೀ</td><td>1,65,229.00</td></tr>
<tr><td>3</td><td>ರಾಷ್ಟ್ರೀಯ ಸ್ವಾಸ್ಥ್ಯ ಭೀಮ ಯೋಜನೆ</td><td>79,210.00</td></tr>
<tr><td>4</td><td>ಯಶಸ್ವಿನಿ ಆರೋಗ್ಯ ಟ್ರಸ್ಟ್</td><td>3,10,456.00</td></tr>
<tr><td>ಆ</td><td colspan="2">ಇತರೆ ಲೆಕ್ಕ–ಶೀರ್ಷಿಕೆಯಡಿ ಬಿಡುಗಡೆಯಾಗಿರುವ ಅನುದಾನಕ್ಕೆ ಬ್ಯಾಂಕ್‌ನಿಂದ ನೀಡಿರುವ ಬಡ್ಡಿ ವಿವರ</td></tr>
<tr><td>1</td><td>2210–05–105–149–101, 118 (MasterA/C & Pension)</td><td>4,13,400.00</td></tr>
<tr><td>2</td><td>2210–05–105–149–103(Hospital A/C)</td><td>7,44,568.00</td></tr>
<tr><td>3</td><td>2210–05–105–149–102(Construction A/C)</td><td>47,889.00</td></tr>
<tr><td>4</td><td>2210–05–105–422/423(SCP/TSP)</td><td>7,31,433.00</td></tr>
<tr><td></td><td>ಒಟ್ಟು ಮೊತ್ತ</td><td>1,37,35,169.00</td></tr>
</table>
ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ವಿವಿಧ ಲೆಕ್ಕ ಶೀರ್ಷಿಕೆಯಡಿ ಬ್ಯಾಂಕ್ ಖಾತೆಯಲ್ಲಿರುವ ಹಣಕ್ಕೆ ಬಂದಿರುವ ಬಡ್ಡಿಯ ಹಣವನ್ನು ಸರ್ಕಾರವು ಯಾವು ಉದ್ದೇಶಕ್ಕೆ ಅನುದಾನವನ್ನು ಬಿಡುಗಡೆ ಮಾಡಿತ್ತೋ ಅದೇ ಉದ್ದೇಶಕ್ಕೆ ಸದರಿ ಬಡ್ಡಿ ಹಣವನ್ನು ಉಪಯೋಗಿಸಿಕೊಳ್ಳುವುದೆಂದು ಹಾಗೂ ಇದೇ ನಿಯಮವನ್ನು ಮುಂದಿನ ದಿನಗಳಲ್ಲಿಯೂ ಮುಂದುವರೆಸಿಕೊಂಡು ಹೋಗುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.</td></tr>
<tr><td>16</td><td>ಹಿಮ್ಸ್ ಸಂಸ್ಥೆಯ ಅಧೀನದಲ್ಲಿರುವ ಹಾಸನ ಮತ್ತು ಹೊಳೆನರಸೀಪುರ ಸರ್ಕಾರಿ</td><td>ಹಿಮ್ಸ್ ಸಂಸ್ಥೆಯ ಅಧೀನದಲ್ಲಿರುವ ಹಾಸನ ಮತ್ತು ಹೊಳೆನರಸೀಪುರ ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯಗಳಲ್ಲಿ ಖಾಲಿ ಇರುವ ಬೋಧಕ ಮತ್ತು</td></tr>
</table>

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
| --- | --- | --- |
| | ಶುಶ್ರೂಷಾ ಮಹಾವಿದ್ಯಾಲಯಗಳಲ್ಲಿ ಐ.ಎನ್.ಸಿ ನಿಯಮಾನುಸಾರ ಅಗತ್ಯವಿರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ. | ಬೋಧಕೇತರ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳುವ ಸಂಬಂಧ ದಿನಾಂಕ: 10-06-2015ರಂದು ನಡೆದ 23ನೇ ಆಡಳಿತ ಮಂಡಳಿ ಸಭೆಯಲ್ಲಿ ಆರೋಗ್ಯ ಮತ್ತು ಕುಟುಂಬ ಇಲಾಖೆಯಲ್ಲಿ ಸಿ & ಡಿ ದರ್ಜೆಯ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಅನುಸರಿಸುತ್ತಿರುವ ನಿಯಮಗಳನ್ನೇ ಅನುಸರಿಸಿ ಕೆ.ಇ.ಎ ಮುಖಾಂತರ ಬೋಧಕೇತರ ಹುದ್ದೆಗಳನ್ನು ನೇಮಕ ಮಾಡಿಕೊಳ್ಳುವುದೆಂದು ಮತ್ತು ದಿನಾಂಕ: 26-11-2015ರಂದು ನಡೆದ 25ನೇ ಆಡಳಿತ ಮಂಡಳಿ ಸಭೆಯಲ್ಲಿ ಬೋಧಕ ಹುದ್ದೆಗಳ ನೇಮಕಾತಿ ಸಂಬಂಧ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರುರವರು ಸಿ.&ಆರ್ ನಿಯಮಗಳನ್ನು ರಚಿಸುತ್ತಿದ್ದು ನಿಯಮಗಳು ಅಂತಿಮಗೊಂಡ ನಂತರ ಬೋಧಕ ಹುದ್ದೆಗಳನ್ನು ನಿಯಮನಾನುಸಾರ ಭರ್ತಿ ಮಾಡಿಕೊಳ್ಳುವುದೆಂದು ತೀರ್ಮಾನವಾಗಿರುತ್ತದೆ.<br>ಆಡಳಿತ ಮಂಡಳಿ ತೀರ್ಮಾನದಂತೆ, ನೇಮಕಾತಿ ಪ್ರಕ್ರಿಯೆ ನಡೆಸಿಕೊಡುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪತ್ರ ಬರೆಯಲಾಗಿದ್ದು ಸಂಬಂಧಪಟ್ಟ ಇಲಾಖೆಯವರು ಸ್ಪಂದಿಸಿರುವುದಿಲ್ಲ ಇದರಿಂದಾಗಿ ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯಗಳಲ್ಲಿ ಸಿಬ್ಬಂದಿಗಳ ಕೊರತೆಯಾಗಿದ್ದು ವಿದ್ಯಾರ್ಥಿಗಳ ಪಾಠ-ಪ್ರವಚನಕ್ಕೆ ತೊಂದರೆಯಾಗುತ್ತಿದೆ ಎಂದು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯ ಹಾಸನ ಮತ್ತು ಹೊಳನರಸೀಪುರ ಸಂಸ್ಥೆಗಳಲ್ಲಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಕೆ.ಇ.ಎ ಮುಖಾಂತರವೇ ನೇಮಕ ಮಾಡಿಕೊಳ್ಳುವುದೆಂದು ತೀರ್ಮಾನಿಸಿ ಈ ವಿಚಾರವಾಗಿ ಸರ್ಕಾರದ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ವೈ.ಶಿ, ಇವರ ಮುಖಾಂತರ ಕೆ.ಇ.ಎ.ಗೆ ಪತ್ರ ಬರೆಯುವುದೆಂದು ತೀರ್ಮಾನಿಸಲಾಯಿತು. |
| 17 | ರೋಗ ಲಕ್ಷಣಶಾಸ್ತ್ರ ವಿಭಾಗದ ಪ್ರಯೋಗಾಲಯಕ್ಕೆ ಅತಿ ಅವಶ್ಯಕವಿರುವ 5 part hematology cell counter ಮತ್ತು 3 part hematology cell counter ಉಪಕರಣಗಳನ್ನು "Reagent rental | ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಯ ರೋಗಲಕ್ಷಣ ಶಾಸ್ತ್ರ ವಿಭಾಗಕ್ಕೆ ಬರುತ್ತಿರುವ ರೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದ್ದು ಡೆಂಗ್ಯೂ ರೋಗದಿಂದ ಬಳಲುತ್ತಿರುವ ರೋಗಿಗಳ ಸಂಖ್ಯೆಯು ಕೂಡ ಹೆಚ್ಚಿರುತ್ತದೆ. ಪ್ರಸ್ತುತ ಪ್ರಯೋಗಾಲಯದಲ್ಲಿರುವ 3 part hematology cell counter ಉಪಕರಣವನ್ನು 9 ವರ್ಷಗಳ ಹಿಂದೆ ಖರೀದಿಸಲಾಗಿದ್ದು |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | basis" ಮಾದರಿಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ. | ಪದೇ ಪದೇ ರಿಪೇರಿ ಬರುತ್ತಿದ್ದು ಸದರಿ ಯಂತ್ರದ ಬಿಡಿಭಾಗಗಳ ವೆಚ್ಚವು ಅಧಿಕವಾಗಿದ್ದು ಸಂಸ್ಥೆಗೆ ಹೆಚ್ಚಿನ ಆರ್ಥಿಕ ಹೊರೆಯಾಗುವುದರೊಂದಿಗೆ ನಿಗದಿತ ಸಮಯದಲ್ಲಿ ಉಪಕರಣವು ರಿಪೇರಿಯಾಗದೇ ಬಡರೋಗಿಗಳಿಗೆ ತೊಂದರೆಯಾಗುತ್ತಿದೆ. ಈ ನಿಟ್ಟಿನಲ್ಲಿ ಪ್ರಯೋಗಾಲಯದ ಗುಣಮಟ್ಟವನ್ನು ಹೆಚ್ಚಿಸುವುದರ ಜೊತೆಗೆ ರೋಗಿಗಳಿಗೆ ಇನ್ನು ಹೆಚ್ಚಿನ ಪ್ರಯೋಗಾಲಯ ಸೌಲಭ್ಯವನ್ನು ದೊರಕಿಸಿ ಕೊಡಲು ಒಂದು 5 part hematology cell counter ಮತ್ತು ಒಂದು 3 part hematology cell counter ಉಪಕರಣಗಳು ಅವಶ್ಯಕವಾಗಿರುತ್ತದೆ. ಸದರಿ ಉಪಕರಣವನ್ನು ತುರ್ತಾಗಿ ಖರೀದಿಸಿ ಕೊಡುವಂತೆ ವಿಭಾಗದ ಮುಖ್ಯಸ್ಥರು ಮನವಿ ಸಲ್ಲಿಸಿರುತ್ತಾರೆ.<br>ಮುಂದುವರೆದು ಸದರಿ ಎರಡು ಉಪಕರಣಗಳನ್ನು ಖರೀದಿಸಲು ಅಂದಾಜು ರೂ.18.00 ಲಕ್ಷ ವೆಚ್ಚವಾಗುವುದರೊಂದಿಗೆ ಸದರಿ ಉಪಕರಣದ ನಿರ್ವಹಣೆ ಮತ್ತು ರಿಪೇರಿ ಬಂದಲ್ಲಿ, ರಿಪೇರಿ ವೆಚ್ಚವು ಅಧಿಕವಾಗುತ್ತದೆ. ಇದರ ಬದಲಿಗೆ **"Reagent rental basis"** ಅಳವಡಿಸಿಕೊಂಡಲ್ಲಿ Reagent ಸರಬರಾಜು ಮಾಡುವ ಎಲ್-1, ಬಿಡ್‌ದಾರರು hematology cell counter ಉಪಕರಣಗಳನ್ನು ಉಚಿತವಾಗಿ ಸರಬರಾಜು ಮಾಡಿ ಸದರಿ ಉಪಕರಣಗಳ ಸಂಪೂರ್ಣ ನಿರ್ವಹಣೆಯನ್ನು ನೋಡಿಕೊಳ್ಳುವುದರೊಂದಿಗೆ ಉಪಕರಣವು ರಿಪೇರಿ ಬಂದಲ್ಲಿ ಅದರ ಬದಲಿಗೆ ತಕ್ಷಣವೇ ಮತ್ತೊಂದು ಉಪಕರಣದ ವ್ಯವಸ್ಥೆ ಮಾಡಿ ನಿರಂತರ ಸೇವೆಯಲ್ಲಿ ಯಾವುದೇ ರೀತಿಯ ವ್ಯತ್ಯಯ ಆಗದಂತೆ ನೋಡಿಕೊಳ್ಳಬೇಕೆಂಬ ಷರತ್ತನ್ನು ಟೆಂಡರ್‌ನಲ್ಲಿ ಅಳವಡಿಸುವುದರಿಂದ ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಸೌಲಭ್ಯವನ್ನು ಪಡೆಯಬಹುದಾಗಿರುತ್ತದೆಂದು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಮೇಲ್ಕಂಡ ಎರಡು hematology cell counter ಉಪಕರಣಗಳನ್ನು "Reagent rental basis" ಮುಖಾಂತರ ಅಳವಡಿಸಿಕೊಳ್ಳುವುದೆಂದು ನಿರ್ಣಯಿಸಿ ನಾಲ್ಕು ವರ್ಷಗಳ ಅವಧಿಗೆ ಅನ್ವಯಿಸುವಂತೆ ನಿಯಮಾನುಸಾರ ಇ-ಟೆಂಡರ್ ಪ್ರಕ್ರಿಯೆ ಕೈಗೊಳ್ಳುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 18 | ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು | |
| 18(1) | ಶ್ರೀ.ಅಶೋಕ್ ಕುಮಾರ್, ಶುಶ್ರೂಷಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಸನ ಮತ್ತು ಕುಮಾರಿ.ನೇತ್ರಾವತಿ ವೈ.ಎಂ., ಶುಶ್ರೂಷಕರು ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ ಇವರುಗಳ ಪರಸ್ಪರ ವರ್ಗಾವಣೆ ಬಗ್ಗೆ. | ಶ್ರೀ.ಅಶೋಕ್ ಕುಮಾರ್, ಇವರು ಗುಲುಬರ್ಗಾ ಜಿಲ್ಲೆ, ಸೇಡಂ ತಾಲ್ಲೂಕಿನ, ದೇವನೂರು ಗ್ರಾಮದವರಾಗಿದ್ದು, ಕೆ.ಇ.ಎ. ಮುಖಾಂತರ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಶುಶ್ರೂಷಕರಾಗಿ ಆಯ್ಕೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದೇ ರೀತಿ ಕುಮಾರಿ. ನೇತ್ರಾವತಿ ವೈ.ಎಂ., ಇವರು ಕೊಡಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕು, ಬೆಳ್ಳುಮಡು ಗ್ರಾಮದವರಾಗಿದ್ದು.ಕೆ.ಇ.ಎ ಮುಖಾಂತರ ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ ಇಲ್ಲಿಗೆ ಶುಶ್ರೂಷಕರಾಗಿ ಆಯ್ಕೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸದರಿ ನೌಕರರುಗಳಿಗೆ ವಯಸ್ಸಾದ ತಂದೆ-ತಾಯಿಗಳಿದ್ದು ಅವರುಗಳ ಪಾಲನೆಯನ್ನು ಸದರಿ ನೌಕರರುಗಳೇ ನೋಡಿಕೊಳ್ಳಬೇಕಾಗಿರುತ್ತದೆಂದು ಮನವಿ ಸಲ್ಲಿಸಿ ಕೌಟಂಬಿಕ ಹಿನ್ನೆಲೆಯಲ್ಲಿ ಪರಸ್ಪರ ವರ್ಗಾವಣೆ ಮಾಡಿಕೊಡುವಂತೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಿರುವುದರ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.<br>ಕೌಟಂಬಿಕ ಹಿನ್ನೆಲೆಯಲ್ಲಿ ಶ್ರೀ.ಅಶೋಕ್ ಕುಮಾರ್, ಶುಶ್ರೂಷಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಸನ ಇವರನ್ನು ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿಗೆ ಹಾಗೂ ಕುಮಾರಿ. ನೇತ್ರಾವತಿ ವೈ.ಎಂ., ಶುಶ್ರೂಷಕರು ಗುಲ್ಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ ಇವರನ್ನು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಸನ ಇಲ್ಲಿಗೆ ಪರಸ್ಪರ ವರ್ಗಾವಣೆ ಮಾಡುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.<br>"ವಂದನೆಗಳೊಂದಿಗೆ ಸಭೆ ಮುಕ್ತಾಯವಾಯಿತು" |

(ಡಾ.ಬಿ.ಸಿ. ರವಿಕುಮಾರ್),
ನಿರ್ದೇಶಕರು ಹಾಗೂ
ಸದಸ್ಯ ಕಾರ್ಯದರ್ಶಿ, ಆಡಳಿತ ಮಂಡಳಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

(ವಿ.ಮಂಜುಲ) ಭಾಆಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ
ಹಾಗೂ ಉಪಾಧ್ಯಕ್ಷರು,
ಆಡಳಿತ ಮಂಡಳಿ, ಹಿಮ್ಸ್, ಹಾಸನ.

(ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್)
ವೈದ್ಯಕೀಯ ಶಿಕ್ಷಣ ಸಚಿವರು,
ಕರ್ನಾಟಕ ಸರ್ಕಾರ ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.